ಭಾಷೆಯ ಈ ಕವಿತೆಗಳು ಈವರೆಗೂ ಓದುಗರ ಪ್ರಮಾಣವನ್ನು ಹಿಗ್ಗಿಸಿಕೊಳ್ಳುತ್ತ ಬಂದಿರುವುದು ತನ್ನ ರಚನೆ, ವಿನ್ಯಾಸ, ಲಯಗಳ ಹೊಸತನ ಮತ್ತು ತೀವ್ರತೆಯಿಂದಾಗಿ. ಈ ಸಂಕಲನಕ್ಕೆ ಪ್ರತಿಷ್ಠಿತ 'ಎಪಿಬಿ' ಸಾಹಿತ್ಯಪ್ರಶಸ್ತಿ ಲಭಿಸಿತು. ಆಕಾಶ (ಸ್ಮೋಕ್) ಮತ್ತು ಪೃಥ್ವಿ(ಓಕರ್)ಯ ತತ್ವ ಮತ್ತು ಅವುಗಳ ನಡುವಿನ ಬದುಕನ್ನು ಪ್ರೀತಿಯ ತಂತುಗಳ ಮೂಲಕ ಈ ಕವಿತೆಗಳು ಬೆಸೆಯುತ್ತವೆ.

'ಆಕಾಶ ಬಯಲಿಗೆ ಗುರಿಯಿಟ್ಟ ಗರಿಯ ಪುಟ್ಟ ಬಾಣ
ಮಾಸಿ ಕರಗಿಹೋಗುತ್ತದೆ ಅಲ್ಲಿಂದ ಒಲವು ತುಂಬಿದ್ದ ತಾಣ,
ಶವಪೆಟ್ಟಿಗೆಗೆ ಬಡಗಿ ಹೊಡೆಯುತ್ತಾನೆ ಕೊನೆಯ ಮೊಳೆಗಳನ್ನು
ಸಿದ್ಧವಾಗುತ್ತೇನೆ ನಾನು ಎದುರುಗೊಳ್ಳಲು ಆ ಶೂನ್ಯವನ್ನು' ಎನ್ನುವ ಮೂಲಕ ಈ ಸಂಕಲನದ ಕವಿತೆಗಳು, ಕ್ಷಣಿಕವೆಂದು ತೋರುವ ಗಳಿಗೆಯ ಒಳಗೇ ಅಡಗಿ ಕುಳಿತಿರುವ ಅನಂತವನ್ನು ಸ್ಪರ್ಶಿಸುತ್ತ ಕವಿತೆಯ ಆತ್ಮವನ್ನು ಸೃಷ್ಟಿಸಿಕೊಳ್ಳುತ್ತವೆ.

★★★

1965ರ ಜೂನ್ ತಿಂಗಳಿನಲ್ಲಿ ಇನ್‌ಗ್ರಿಡ್ ತನ್ನ ಗೆಳೆಯ ಜಾಕ್ ಕೋಪ್‌ಗೆ ಬರೆದ ಪತ್ರದಲ್ಲಿ ನೀರಿನಲ್ಲಿ ಮುಳುಗಿ ಆತ್ಮಹತ್ಯೆ ಮಾಡಿಕೊಳ್ಳಬೇಕೆನಿಸುತ್ತಿದ್ದ ತನ್ನ ಮನಃಸ್ಥಿತಿಯ ಬಗ್ಗೆ ಹಂಚಿಕೊಳ್ಳುತ್ತ, "ಕೆಲವರಿಗೆ ನನ್ನ ಈ ಆಲೋಚನೆಯು ಹೃದಯಹೀನ, ಪ್ರತಿಭಟನಾತ್ಮಕ ಎನಿಸಬಹುದು. ನನ್ನ ಮಟ್ಟಿಗೆ, ಒಬ್ಬ ವ್ಯಕ್ತಿಯು ಕ್ಯಾನ್ಸರ್‌ನಿಂದ ಸಾಯುವುದಕ್ಕಿಂತ ಇದು ಯಾವ ಬಗೆಯಲ್ಲೂ ಭಿನ್ನವಲ್ಲ—ಈಗ ಕ್ಯಾನ್ಸರ್ ನನ್ನ ಆತ್ಮದಲ್ಲಿದೆ ಅಷ್ಟೆ" ಎಂಬ ಬೆಚ್ಚಿಬೀಳಿಸುವ ಮಾತನ್ನು ಬರೆದಳು; ಇನ್‌ಗ್ರಿಡ್ ಸಂಪ್ರದಾಯವಾದಿ ಆಫ್ರಿಕಾನ್ ಸಾಹಿತ್ಯದ ಕಟ್ಟುಪಾಡುಗಳನ್ನು ಪ್ರಶ್ನಿಸಿದಳು; ಕವಿತೆಗಳ ಸ್ವರೂಪದಲ್ಲಿ ಸುಲಭ ಸಂವಹನಕ್ಕೆ ರಾಜಿ ಮಾಡಿಕೊಳ್ಳದೆ ಸಂಕೀರ್ಣ, ಬಹುಮುಖತೆಯ ಕವಿತೆಗಳನ್ನು ಬರೆದಳು; ಸ್ವರದ ಜಾಲದೊಳಗೆ ಕವಿತೆಯ ಬಂಧವನ್ನು ಹೆಣೆದು ಹೊಸ ಲಯಗಳನ್ನು ಪರಿಚಯಿಸಿದಳು; ಛಂದಸ್ಸಿನ ಬಿಗಿಯನ್ನು ಸಡಿಲಗೊಳಿಸಿ ಮುಕ್ತಛಂದದ ಕವಿತೆಗಳನ್ನು ಬರೆದಳು; ಜಾನಪದದ ಮಟ್ಟುಗಳನ್ನು ಬಳಸಿಕೊಂಡು ಹಾಡುಗೀತೆಗಳನ್ನು ರಚಿಸಿದಳು; ಸಾವು–ಬದುಕು, ಪ್ರೀತಿ–ವಿರಹ, ಹಗಲು–ಬೆಳಕಿನ ವೈರುಧ್ಯಗಳ ಮೂಲಕ ಮನುಷ್ಯ ಮತ್ತು ಮಾನವೀಯತೆಯನ್ನು ಮುಖಾಮುಖಿಯಾಗಿಸಿದಳು.

ಒಂಟಿ ತಾಯಿಯಾಗಿ ಇನ್‌ಗ್ರಿಡ್ ಬದುಕು ನೀಗಿಸಲು ಮಾಡಿದ ಕೆಲಸಗಳು ಹಲವಾರು: ಪ್ರಿಂಟಿಂಗ್ ಪ್ರೆಸ್‌ನಲ್ಲಿ ಪ್ರೂಫ್ ತಿದ್ದುವ ಕೆಲಸ, ಪತ್ರಿಕೆಯ ಚಂದಾ ವಸೂಲಿ ಕೆಲಸ, ಜಾಹೀರಾತುಗಳ ಅನುವಾದ ಕೆಲಸ ಇತ್ಯಾದಿ. ಗೆಳೆಯ ಆಂಡ್ರೆ ಬಿಂಕ್‌ಗೆ ಇರುವಂಥ ಓದುವ ಕೋಣೆ ಅವಳ ಕನಸಾಗಿತ್ತು. ಆರ್ಥಿಕ ಮತ್ತು ದೈಹಿಕ ಸಂಘರ್ಷದ ನಡುವೆ ಲಾಳಿ ಹೊಡೆಯುತ್ತಿದ್ದ ಬದುಕು ಅವಳನ್ನು ಇನ್ನಿಲ್ಲದಂತೆ ದಣಿಸಿ, ಬದುಕಿನ ಪ್ರತಿಕ್ಷಣವನ್ನೂ ಆವರಿಸಿಕೊಂಡಿತ್ತು. ತನ್ನ ಸ್ಥಿತಿಯನ್ನು ಯಾರೊಂದಿಗೂ ಸುಲಭವಾಗಿ ಹೇಳಿಕೊಳ್ಳದ ಸ್ವಾಭಿಮಾನ ಇನ್‌ಗ್ರಿಡ್‌ಳನ್ನು ಇದು ಒಂಟಿಯಾಗಿಸಿತು. ಈ ಜಂಜಡಗಳ ನಡುವೆ ಸಿಕ್ಕ ಕೆಲವು ಕ್ಷಣಗಳ ಏಕಾಂತದಲ್ಲಿ ಅವಳು ಹೊಚ್ಚಹೊಸ ಮಾದರಿಯ ಕವಿತೆಗಳನ್ನು ಬರೆದಳು, ಜೊತೆಗೆ ಸಣ್ಣಕತೆ, ನಾಟಕವನ್ನೂ ಬರೆದಳು. ಇಷ್ಟೆಲ್ಲದರ ಮಧ್ಯೆ ಇನ್‌ಗ್ರಿಡ್ ವ್ಯಕ್ತಿತ್ವದ ಭಾಗವಾಗಿದ್ದ ಅಸಮಾನತೆ, ಅನ್ಯಾಯಗಳನ್ನು ಸಹಿಸದ ಗುಣವು ಸದಾ ಎಚ್ಚರವಿರುತ್ತಿತ್ತು ಎಂಬುದಕ್ಕೆ ಈ ನಿದರ್ಶನ ಸಾಕ್ಷಿ: ಒಮ್ಮೆ ಇನ್‌ಗ್ರಿಡ್ ಪ್ರಯಾಣಿಸುತ್ತಿದ್ದ ಬಸ್ಸಿನಲ್ಲಿ ಕರಿಯಳೊಬ್ಬಳನ್ನು ಬಸ್ಸಿನಿಂದ ಇಳಿಸಿದ್ದಕ್ಕಾಗಿ ಕಂಡಕ್ಟರ್ ಜೊತೆಗೆ ಜಗಳವಾಡಿ, ಆ ಜಗಳ ವಿಕೋಪಕ್ಕೆ ತಿರುಗಿ ಇನ್‌ಗ್ರಿಡ್ ಕಂಡಕ್ಟರನನ್ನು